ಆ) ದಾವಣಗೆರೆ ಜಿಲ್ಲೆಯಲ್ಲಿ ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಇ) ಅವುಗಳ ಪೈಕಿ ವಿದ್ಯುತ್ ಸಂಪರ್ಕ ಒದಗಿಸಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಈ) ಇನ್ನೂ ವಿದ್ಯುತ್ ಸಂಪರ್ಕ ಒದಗಿಸಬೇಕಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮಿಣಾಭಿವೃದ್ದಿ ಮತ್ತು ಪಂ.ರಾಜ್ ಸಚಿವರು) :

ಅ) 1998-99ನೇ ಸಾಲಿನಲ್ಲಿ (ಫೆಬ್ರವರಿ 99 ರ ಅಂತ್ಯಕ್ಕೆ) ಒಟ್ಟು 5396 ಕೊಳವೆ ಬಾವಿಗಳನ್ನು ಕೈಪಂಪು ಮತ್ತು ನೀರು ಸರಬರಾಜು ಯೋಜನೆಗೆಂದು ಕೊರೆಯಲಾಗಿದೆ. ಇವುಗಳಲ್ಲಿ 659 ನೀರು ಸರಬರಾಜು ಯೋಜನೆಗೆಂದು ಕೊರೆಯಲಾದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ಆ) 1998-99 ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು 247 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಇ) ನೀರು ಸರಾಬರಾಜು ಯೋಜನೆಗಳಿಗೆಂದು ಕೊರೆಯಲಾದ 99 ಕೊಳವೆ ಬಾವಿಗಳಲ್ಲಿ 33 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ಈ) 66 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೆಕಾಗಿದೆ.

ಬಿಜಾಪುರ ಜಿಲ್ಲಾ ಆಸ್ಪತ್ರೆಯನ್ನು ಕೆಹೆಚ್ಎಸ್ಡಿಪಿಯವರಿಗೆ ವಹಿಸುವುದು

1028 (1484)

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ (ತಿಕೋಟ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ವಿಜಾಪುರ ಜಿಲ್ಲಾ ಆಸ್ಪತ್ರೆಯನ್ನು ಅಭಿವೃದ್ದಿ ಸಲುವಾಗಿ ಕೆಹಚ್ಎಸ್ಡಿಪಿಯವರಿಗೆ ವಹಿಸಿ ಕೊಟ್ಟಿರುವ ದಿನಾಂಕ ಯಾವುದು?

ಆ) ಅದನ್ನು ನಿರ್ವಹಿಸಿಕೊಂಡ ಮೇಲೆ ಇಲ್ಲಿಯವರೆಗೆ ಅವರು ಕೈಗೊಂಡಿರುವ ಅಭಿವೃದ್ದಿ ಕಾರ್ಯಗಳು ಯಾವುವು (ವಿವರ ಮಾಹಿತಿ ಒದಗಿಸುವುದು)

ಇ) ಸದರಿ ಯೋಜನೆಯಡಿ ಕೈಗೊಂಡ ಅಭಿವೃದ್ದಿ ಕಾಮಗಾರಿಗಳ ಮೊತ್ತವೆಷ್ಟು ಮತ್ತು ಯಾವ ಯಾವ ಕಾಮಗಾರಿಗಳು ಯಾವಾಗ ಪೂರ್ಣವಾಗುತ್ತದೆ?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ದಿ ಯೋಜನೆಯು ಜೂನ್ 1996 ರಲ್ಲಿ ಪ್ರಾರಂಭವಾದಾಗಿನಿಂದ ಯೋಜನೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ವಿಜಾಪುರ ಜಿಲ್ಲಾ ಆಸ್ಪತ್ರೆಯು ಸೇರ್ಪಡೆಯಾಗಿದೆ. ಆದರೆ ಹಾಲಿ ಇರುವ ಕಟ್ಟಡಗಳ ನವೀಕರಣ ಹಾಗೂ ಹೊಸ ಕಟ್ಟಡಗಳ ನಿರ್ಮಾಣಕ್ಕಾಗಿ ಟೆಂಡರುಗಳು ಅನುಮೋದನೆಯಾದ ನಂತರ ಆಸ್ಪತ್ರೆಯನ್ನು ಕೆಹೆಚ್ಎಸ್ಡಿಪಿಯ ವಶಕ್ಕೆ ತೆಗೆದುಕೊಂಡು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ) ವಿಶ್ವಬ್ಯಾಂಕ್ ನಿಯಮಗಳಡಿ ನಿಗದಿಪಡಿಸಿರುವ ರೀತ್ಯ ವೈದ್ಯಕೀಯ ಹಾಗೂ ಇತರೆ

ಸಲಕರಣೆಗಳು ಹೆಚ್ಚುವರಿ ವೈದ್ಯರು ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ಅವರಿಗೆ ಅಗತ್ಯ ತರಬೇತಿ ಔಷಧ ಮತ್ತು ಪ್ರಯೋಗ ಶಾಲಾ ರಾಸಾಯನಿಕಗಳು ಇತ್ಯಾದಿಗಳನ್ನು ಒದಗಿಸಲು ಕ್ರಮತೆಗೆದುಕೊಳ್ಳಲಾಗಿದ್ದು ಪೂರ್ಕೆಕೆ ವಿವಿಧ ಹಂತಗಳಲ್ಲಿವೆ. ಆಸ್ಪತ್ರೆಯ ಅಭಿವೃದ್ಧಿ ಯೋಜನೆಯಡಿ ಹಾಲಿ ಆಸ್ಪತ್ರೆಯ ನವೀಕರಣ ಮತ್ತು ವಿಸ್ತರಣೆಯೂ ಸೇರಿದ್ದು ಇದಕ್ಕಾಗಿ ಟೆಂಡರುಗಳನ್ನು ಕರೆಯಲಾಗಿದೆ.

ಇ) ಕಟ್ಟಡ ನಿರ್ಮಾಣ ವಿಭಾಗದಲ್ಲಿ ಹಾಲಿ ಈಗ ಇರುವ ಆಸ್ಪತ್ರೆ 3 ವೈದ್ಯರ 4 ದಾದಿಯರ ಮತ್ತು 4 ಗ್ರೂಪ್ ಡಿ ನೌಕರರ ವಸತಿ ಗೃಹಗಳ ನವೀಕರಣ ಮತ್ತು ಹೊಸ ವಾರ್ಡುಗಳು, 5 ವೈದ್ಯರ 10 ದಾದಿಯರ ಮತ್ತು 12 ಗ್ರೂಪ್ ಡಿ ನೌಕರರ ವಸತಿ ಗೃಹಗಳ ನಿರ್ಮಾಣ ವನ್ನೊಳಗೊಂಡಂತೆ ಒಟ್ಟು ರೂ. 295.00 ಲಕ್ಷಕ್ಕೆ ಅಂದಾಜು ವಿಶ್ವಬ್ಯಾಂಕಿನಿಂದ ಮಂಜೂರಾಗಿದೆ. ಈ ಕಾಮಗಾರಿಗೆ ಟೆಂಡರುಗಳನ್ನು ಕರೆಯಲಾಗಿದ್ದು ಟೆಂಡರುಗಳನ್ನು ಸ್ವೀಕರಿಸಲು 17-4-99 ಕಡೆಯ ದಿನವಾಗಿರುತ್ತದೆ. ಟೆಂಡರುಗಳ ಮೌಲ್ಯಮಾಪನದ ನಂತರ ವಿಶ್ವಬ್ಯಾಂಕಿನ ಅನುಮೋದನೆ ಪಡೆದು ನಿರ್ಮಾಣ ಕಾರ್ಯವನ್ನು ವಹಿಸಲು ಹಾಗೂ ಕಾಮಗಾರಿ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಕಾಮಗಾರಿಯನ್ನು ಪ್ರಾರಂಭವಾದ ದಿನಾಂಕದಿಂದ 18 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ವಿಜಾಪುರ ಜಿಲ್ಲೆಯಲ್ಲಿ ಡಿ.ಪಿ.ಇ.ಪಿ.ಯೋಜನೆ

1029 (1485)

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ (ತಿಕೋಟ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ವಿಜಾಪುರ ಜಿಲ್ಲೆಯಲ್ಲಿ ಡಿ.ಪಿ.ಇ.ಪಿ. ಯೋಜನೆ ಪ್ರಾರಂಭವಾದ ದಿನಾಂಕ ಯಾವುವು

ಆ) ಸದರಿ ಯೋಜನೆಯಡಿಯಲ್ಲಿ ಆಗಬೇಕಾಗಿರುವ ಕಾಮಗಾರಿಗಳು ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಇ) ಹಾಗಿದ್ದಲ್ಲಿ ಈವರೆಗೆ ಆಗಿರುವ ವಾಸ್ತವಿಕ ವೆಚ್ಚವೆಷ್ಟು ಹಾಗೂ ಆಗಬೇಕಾಗಿದ್ದ ಹಣದ ಅಂದಾಜು ಮೊತ್ತ ಎಷ್ಟು

ಈ) ಸದರಿ ಯೋಜನೆಯನ್ನು ಚುರುಕುಗೊಳಿಸಲು ಸ್ಥಳೀಯ ಶಾಸಕರನ್ನು ಅಥವಾ ಜಿಲ್ಲಾ ಶಾಸಕರನ್ನು ಸೇರಿಸಿ ಅಭಿವೃದ್ಧಿ ಸಲಹಾ ಸಮಿತಿ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಜಿ.ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಿಜಾಪುರ ಜಿಲ್ಲೆಯಲ್ಲಿ ಡಿ.ಪಿ.ಇ.ಪಿ. ಕಾರ್ಯಕ್ರಮ ಅಕ್ಟೋಬರ್ 2, 1997 ರಿಂದ ಪ್ರಾರಂಭವಾಗಿದೆ.

ಆ) ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ಕಾರ್ಯಕ್ರಮಗಳು ಈಗಾಗಲೇ ನಿಗಧಿಪಡಿಸಿರುವಂತೆ ಸರಿಯಾಗಿ ನಡೆಯುತ್ತಿದ್ದು ಸಿವಿಲ್ ಕಾಮಗಾರಿಗಳ ನಿರ್ಮಾಣ ಮಾತ್ರ ಪ್ರಗತಿಯ ವಿವಿಧ ಹಂತದಲ್ಲಿದ್ದು ಈ ಕೆಲಸಗಳು ಪ್ರಗತಿಯಲ್ಲಿವೆ.